**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು**

**ಹುಕ್ಕೇರಿ**

CC No. 942/2024

CW- 4 / PW- 2

ಹೆಸರು : ಈರಪ್ಪ ದುಂಡಪ್ಪ ಗಂಡ್ರೋಳಿ

ವಯಸ್ಸು : 65 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಯರಗಟ್ಟಿ, ತಾಃ ಹುಕ್ಕೇರಿ

ದಿನಾಂಕ 06-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ಎಲ್ ಜೆ ವಕೀಲರಿಂದ –**

1. ನಾನು ಶಾಲೆ ಕಲಿತಿಲ್ಲ. ನಾವು 3 ಜನ ಅಣ್ಣ-ತಮ್ಮಂದಿರು ಅವರ ಹೆಸರು 1. ಬಾಬು, 2. ಕಾಡಪ್ಪ ಮತ್ತು 3. ಈರಪ್ಪ. ನಮ್ಮ ಮನೆತನಕ್ಕೆ 7 ಎಕರೆ ಜಮೀನು ಇದೆ. ಅದರ ಸರ್ವೇ ನಂಬರ್ 63 ಮತ್ತು 46 ಮತ್ತು 2. ಈ ಸರ್ವೇ ನಂಬರ್ ಗಳಲ್ಲಿ ಪಾಲು ಆಗಿಲ್ಲ ಎಂದರೆ ಸರ್ವೇ ನಂಬರ್ 46 ರಲ್ಲಿ ಪಾಲು ಅಗಿದೆ, ಉಳಿದರಲ್ಲಿ ಪಾಲು ಆಗಿಲ್ಲ ಎಂದು ಹೇಳುತ್ತಾರೆ. ಮನೆಗಳಲ್ಲಿ ಪಾಲು ಆಗಿದೆ. ಸರ್ವೇ ನಂಬರ್ 63 ಮತ್ತು 2 ರಲ್ಲಿ ಬಸವರಾಜ ಮತ್ತು ಆತನ ತಾಯಿ ಪಾಲು ಮಾಡಿಕೊಡಿ ಎಂದು ಕೇಳಿದರು ಎಂದರೆ ನಿಜ. ಯರಗಟ್ಟಿ ಊರಿನಲ್ಲಿ ನಾವು ಬಸ ಸ್ಟಾಂಡ್ ಹಚ್ಚಿ ನಾವು 3 ಕಾಂಪ್ಲೆಕ್ಸ್ ಕಟ್ಟಿದ್ದೇವೆ ಎಂದರೆ ನಿಜ. ಆ ಕಾಂಪ್ಲೆಕ್ಸ್ ಕಟ್ಟುವ ಸಮಯದಲ್ಲಿ ಆರೋಪಿ ಬಸವರಾಜ ಮತ್ತು ಆತನ ತಾಯಿ ನಮಗೆ ರೂ. 3,00,000/- ಗಳನ್ನು ಕೊಟ್ಟಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದು ಬಡ್ಡಿ ಮತ್ತು ಅಸಲು ಎರಡನ್ನು ಅವರಿಗೆ ವಾಪಸ ಮಾಡಿದ್ದೇವೆ ಎಂದು ಹೇಳುತ್ತಾರೆ. ಬಾಬುವಿನ ಆಸ್ತಿಯಲ್ಲಿ ಕಾಂಪ್ಲೆಕ್ಸ್ ಕಟ್ಟುವಾಗ ಆರೋಪಿತರು ತಮ್ಮ ದುಡಿದ ಹಣವನ್ನು ಹಾಕಿದರು ಎಂದರೆ ಸರಿಯಲ್ಲ. ಆ ಹಣವನ್ನು ವಾಪಸ್ ಕೇಳುವ ಸಮಯದಲ್ಲಿ ಆರೋಪಿತರಿಗೂ ಮತ್ತು ನಮಗು ವೈಮನಸ್ಸು ಮತ್ತು ಜಗಳ ಆಗಿತ್ತು ಎಂದರೆ ನಿಜ. ನನ್ನ ಮಗಳನ್ನು ಕೇಸ್ತಿಗೆ ಮದುವೆ ಮಾಡಿಕೊಟ್ಟಿದ್ದೇವೆ ಎಂದರೆ ನಿಜ. ಅವಳು ತನ್ನ ಗಂಡನ ಜೊತೆ ಜಗಳ ಮಾಡಿ ತವರು ಮನೆಯಲ್ಲಿ ಇದ್ದಾಳೆ ಎಂದರೆ ನಿಜ. ನನ್ನ ಮಗಳಿಗೆ ಆರೋಪಿ ನಂಬರ್ 2 ಆ ಸಮಯದಲ್ಲಿ ಹಣದ ಅಡಚಣೆಗಾಗಿ ರೂ. 40,000/- ಗಳನ್ನು ಕೊಟ್ಟಿದ್ದರು ಎಂದರೆ ನಿಜ. ನನ್ನ ಮಗಳನ್ನು ಗಂಡನ ಮನಗೆ

ಕಳುಹಿಸುವ ಸಲುವಾಗಿ ಬಸವರಾಜ ಮತ್ತು ನನ್ನ ಮಗ ಊರ ಹಿರಿಯನ್ನು ಕರೆದುಕೊಂಡು ಹೋಗಿ ಪಂಚಿಗೆ ಮಾಡಿ ಬಂದಿದ್ದರು ಎಂದರೆ ಸರಿಯಲ್ಲ. ಆ ಪಂಚಿಗೆ ಮಾಡಿದಾಗ ಅದಕ್ಕೆ ದಾದು ಮಾಡದೆ ನನ್ನ ಮಗಳು ಸಂಕೇಶ್ವರದಲ್ಲಿ ಗಂಡನ ವಿರುದ್ಧ ಕೇಸ್ ಹಾಕಿದ್ದಳು ಎಂದರೆ ನಿಜ. ಆ ಕಾರಣದಿಂದ ಶೋಭಾ ನಾನು ಕೊಟ್ಟಂತಹ ಹಣವನ್ನು ವಾಪಸ್ಸು ಕೊಡು ಹಾಗೂ ಗಂಡನ ಜೊತೆ ಚೆನ್ನಾಗಿ ಇರು ಎಂದು ಬುದ್ಧಿ ಹೇಳಿದಾಗ ನನ್ನ ಮಗಳು ರೂಪ ಸಿಟ್ಟಾಗಿದ್ದಳು ಎಂದರೆ ಸರಿಯಲ್ಲ. ಶೋಭಾ ಕೊಟ್ಟಂತಹ ರೂ.40,000/-ಹಣವನ್ನು ಆಕೆ ಮರಳಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲೆ ಅಕ್ರಮ ಸರಾಯಿ ಮಾರಾಟ ಮಾಡಿದ್ದೇನೆ ಎಂದು ಕೇಸ್ ಇತ್ತು ಎಂದರೆ ನಿಜ. ಆ ಸಮಯದಲ್ಲಿ ಆರೋಪಿತರು ಈ ರೀತಿ ಪೊಲೀಸರು ನಮ್ಮ ಮನೆಗೆ ಬರುವುದು ಸರಿಯಲ್ಲ, ನಮ್ಮ ಮನೆತನಕ್ಕೆ ಇದು ಸರಿ ಬರುವುದಿಲ್ಲ, ಇದನ್ನು ಬಿಡು ಎಂದು ಬುದ್ಧಿವಾದ ಹೇಳಿದರು ಎಂದರೆ ನಿಜ. ನನ್ನ ಮಗ ಜೂಜಾಟ ಆಡುತ್ತಿದ್ದ ಎಂದರೆ ನಿಜ. ಜೂಜಾಟ ಆಡುವ ನನ್ನ ಮಗನ ವಿರುದ್ಧ ಯಮಕನಮರಡಿ ಪೊಲೀಸರು ಚನ್ನಗೌಡ ಪಾಟೀಲ ಹಾಗೂ 1ನೇ ಆರೋಪಿ ಬಸವರಾಜ ಹಾಗೂ ಅವರ ಅಣ್ಣ ಶಂಕರ್ ಕೇಸ್ ಹಾಕಬೇಡಿ ಎಂದು ಬಿಡಿಸಿಕೊಂಡು ಬಂದಿದ್ದರು ಎಂದರೆ ನಿಜ.

2. ಆ ಕಾರಣದಿಂದ ನನ್ನ ಮಗ ಬೇರೆ ಮನೆ ಮಾಡಿಕೊಂಡು ನಮ್ಮ ಮನೆಯ ಪಕ್ಕದಲ್ಲಿ ಇದ್ದಾನೆ ಎಂದರೆ ನಿಜ. ನಮ್ಮ ಹೊಲ ಉತ್ತರ- ದಕ್ಷಿಣ ಇದೆ ಎಂದರೆ ನಿಜ. ನಮ್ಮ ಮತ್ತು ನಮ್ಮ ಅಣ-ತಮ್ಮಂದಿರ ಹೊಲಗಳು ಪೂರ್ವ-ಪಶ್ಚಿಮ ಪಟ್ಟಿ ಇದೆ ಎಂದರೆ ನಿಜ. ಆ ಹೊಲದ ಉತ್ತರಕ್ಕೆ ಹೊಳೆ ಇದೆ ಎಂದರೆ ನಿಜ. ಆ ಹೊಳೆಗೆ ಹೋಗುವ ರಸ್ತ ಉತ್ತರ- ದಕ್ಷಿಣ ಇದೆ ಎಂದರೆ ನಿಜ. ಆ ರಸ್ತೆಗೆ ಹಚ್ಚಿ ನಮ್ಮ ಹೊಲಗಳಿಗೆ ಹೋಗಲು ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ನಿಜ. ನಮ್ಮಗಳ ಹೊಲಕ್ಕೆ ಹೋಗಕ್ಕೆ ಹೋಗಲು ಜಮೀನಿನ ಪೂರ್ವಕ್ಕೆ ರಸ್ತೆ ಇದೆ ಎಂದರೆ ನಿಜ. ಸರ್ವೇ ನಂಬರ್ 63 ಮತ್ತು 2 ರಲ್ಲಿ ಪಾಲು ಆಗದೆ ಅದು ಖಾಲಿ ಹೊಲ ಇದೆ ಎಂದರೆ ನಿಜ. ಸರ್ವೇ ನಂಬರ್ 63 ಮತ್ತು 2 ರಲ್ಲಿ ಪಾಲು ಮಾಡಲು ಆರೋಪಿತರು ಕೇಳಿದ್ದರು ಎಂದರೆ ನಿಜ. ಈ ಎಲ್ಲಾ ಕಾರಣಗಳಿಂದ ನಮಗೂ ಮತ್ತು ಆರೋಪಿತರಿಗೆ ವೈಮನಸ್ಸು ಇದೆ ಎಂದರೆ ನಿಜ. ನಾವು ಈಗ ಊರಿನಲ್ಲಿರುವ ಮನೆಯಲ್ಲಿ ವಾಸವಾಗಿದ್ದೇವೆ. ಘಟನೆ ಆದ ದಿನ ನಿಮಗೆ ಯಾರು ಬಡಿದರು ಎಂದರೆ ಸಾಕ್ಷಿ ನನ್ನ ಅಣ್ಣನ ಮಗ ಮತ್ತು ಅಣ್ಣನ ಹೆಂಡತಿ ಬಡಿಗೆಯಿಂದ ನನ್ನ ತಲೆಗೆ ಬಡಿದರು ಎಂದು ಹೇಳುತ್ತಾರೆ. ಇಬ್ಬರೂ ಕೂಡಿ ಬಡಿದರಾ ಎಂದರೆಸಾಕ್ಷಿ ಇಬ್ಬರೂ ಕೂಡಿ ಬಡಿದರು ಎಂದು ಹೇಳುತ್ತಾರೆ. ರಕ್ತ ಬಂದಿತ್ತಾ ಎಂದರೆ ಸಾಕ್ಷಿ 7 ಹೊಲಿಗೆ ಬಿದ್ದಿತ್ತು ಎಂದು ಹೇಳುತ್ತಾರೆ. ರಕ್ತ ಅರಿಬಿ ಮೇಲೆ ಬಿದ್ದಿತ್ತು ಎಂದು ಹೇಳುತ್ತಾರೆ. ಆ

ಬಟ್ಟೆಗಳನ್ನು ನಾನು ಪೊಲೀಸರಿಗೆ ಕೊಟ್ಟಿದ್ದೇನೆ, ದವಾಖಾನೆಗೂ ಹೋಗಿದ್ದೇನೆ ಎಂದು ಹೇಳುತ್ತಾರೆ. ಆ ಬಡಿಗೆಗೂ ರಕ್ತ ಹತ್ತಿತ್ತು. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ನ್ನು ಸಾಕ್ಷಿಗೆ ತೋರಿಸಲಾಗಿ ಅದಕ್ಕೆ ರಕ್ತ ಹತ್ತಿಲ್ಲ, ಇದು ಆ ಬಡಿಗೆ ಅಲ್ಲ ಎಂದರೆ ಸಾಕ್ಷಿ ಹೌದು ಇದು ಆ ಬಡಿಗೆ ಅಲ್ಲ ಎಂದು ಹೇಳುತ್ತಾರೆ. ಈ ರೀತಿಯ ಬಡಿಗೆಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ನಿಜ. ಆರೋಪಿತರ ಕೈಯ್ಯಲ್ಲಿ ಬಡಿಗೆಗಳು ಇದ್ದವು, ಬಡಿಗೆ ಬಿಟ್ಟು ಬೇರೇನು ಇರಲಿಲ್ಲ. ಆರೋಪಿತರು ಬಂದು ಬಡಿಗೆಯಿಂದ ಬಡಿದರು ಎಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಬಂದಿದ್ದರು, ನಮ್ಮನ್ನು ಕೇಳಿದರು, ಅಲ್ಲಿದ್ದ ಬಡಿಗೆಗಳನ್ನು ತೆಗೆದುಕೊಂಡು ಹೋದರು ಎಂದು ಹೇಳುತ್ತಾರೆ. ಆರೋಪಿತರು ನಮಗೆ ಬಡಿದ ಬಡಿಯನ್ನು ನಾನು ತೆಗೆದು ಇಟ್ಟಿದ್ದು, ಅದನ್ನು ಪೊಲೀಸರು ಬಂದಾಗ ಅದನ್ನು ಕೊಟ್ಟೆ ಎಂದು ಹೇಳುತ್ತಾರೆ. ನಾನು ಪೊಲೀಸರಿಗೆ ಘಟನೆ ಜಾಗ ತೋರಿಸಿದ್ದೇನೆ, ನಮಗೂ ಮತ್ತು ಆರೋಪಿತರಿಗೂ ಓಡಾಡಲು ಇರುವ ಜಾಗವನ್ನು ಸಹ ತೋರಿಸಿದ್ದೇನೆ, ಆಗ ನಾನುಮತ್ತು ನನ್ನ ಮನೆಯವರು ಮಾತ್ರ ಹಾಜರಿದ್ದೆವು ಎಂದು ನುಡಿಯುತ್ತಾರೆ. ಅಲ್ಲಿ ನಾನು ಪೊಲೀಸರಿಗೆ ಯಾವುದೇ ಜಾಗವನ್ನು ತೋರಿಸಿಲ್ಲ, ಹಾಗೂ ಅಲ್ಲಿ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆರೋಪಿತರು ಓಡಾಡುವ ಹಾದಿಗೆ ಸಂಬಂಧಪಟ್ಟಂತೆ ನಮ್ಮ ಸೀಮೆಯಲ್ಲಿ ಬಂದು ನಮಗೆ ಬಡಿದರು ಎಂದು ಹೇಳುತ್ತಾರೆ. ನನಗೆ ನನ್ನ ಮಗನೇ ಬಂದು ಬಡಿದಿದ್ದಾನೆ ಎಂದರೆ ಸರಿಯಲ್ಲ. ಮೇಲೆ ಹೇಳಿದಾ ಕಾರಣಕ್ಕೆ ನಾನು ಆರೋಪಿತರ ಮೇಲೆ ಸಿಟ್ಟಾಗಿ ಖೊಟ್ಟಿ ಪಿರ್ಯಾದಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**

(ಆದಿತ್ಯ ಆರ್. ಕಲಾಲ್)

ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ